ದೇಶದಲ್ಲಿಯೇ ನಡೆದಹಾಗೆ ನಡೆದಿದೆ. ಇದರ ಬಗ್ಗೆ ನಾನು ಮತ್ತೆ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಮ್ಮ ಪಕ್ಷಕ್ಕೆ ಮತ್ತೊಂದು ಸಾರಿ ಸದವಕಾಶ ಸಿಕ್ಕಿದಾಗ ಆದನ್ನು ಸದುಪಯೋಗಪಡಿಸಿಕೊಳ್ಳತಕ್ಕಂಥ ನಿಷ್ಠೆ, ನಂಬಿಕೆ ಮತ್ತು ತಾಕತ್ತಿನ ಬಗ್ಗೆ ಅಪಾರವಾದ ನಂಬಿಕೆಯನ್ನು ಇಟ್ಟುಕೊಂಡು ನಾವು ಮುಂದಕ್ಕೆ ಹೋಗುತ್ತೇವೆ. ಫಲಿತಾಂಶವನ್ನು ಜನತೆಯ ಹಿತದೃಷ್ಟಿಯಿಂದ ತರುತ್ತೇವೆ. ಕರ್ನಾಟಕ ರಾಜ್ಯದ ಅಭ್ಯುದಯ ದೃಷ್ಟಿಯಿಂದ ಕೂಡ, ನಾವು ಅವರ ಒಳಿತಿಗೋಸ್ಕರ ವಿಚಾರ ಮಾಡುತ್ತೇವೆ ಎಂದು ನಮ್ಮ ಮುಖಾಂತರ, ಈ ಸದನದ ಮುಖಾಂತರ ಕರ್ನಾಟಕ ರಾಜ್ಯದ ಜನತೆಗೆ ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಈಗ ನಾನು ಏನು ನಿರ್ಣಯವನ್ನು ಮಂಡನೆ ಮಾಡಿದ್ದೇನೆ, ಇದಕ್ಕೆ ಸಂಪೂರ್ಣವಾದ ಬೆಂಬಲವನ್ನು ಸದನದ ಎಲ್ಲಾ ಮೂಲೆಗಳಿಂದಲೂ ನಾನು ಕೋರುತ್ತಿದ್ದೇನೆ ಹಾಗೂ ಮಾನ್ಯ ಅಧ್ಯಕ್ಷರಿಗೆ ವಂದಿಸ್ತುತ್ತೇನೆ.

ವಿಶ್ವಾಸ ಮತದ ನಿರ್ಣಯದ ಅಂಗೀಕಾರ

ಅಧ್ಯಕ್ಷರು:- "ಶ್ರೀ ಎಸ್.ಬಂಗಾರಪ್ಪ ಅವರ ನೇತೃತ್ವದ ಮಂತ್ರಿಮಂಡಲದಲ್ಲಿ ಈ ಸದನವು ತನ್ನ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ." ಎಂಬ ನಿರ್ಣಯವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ " ಈ ಸದನವು ಶ್ರೀ ಎಸ್.ಬಂಗಾರಪ್ಪ ಅವರ ನೇತೃತ್ವದ ಮಂತ್ರಿಮಂಡಲದಲ್ಲಿ ತನ್ನ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಪ್ರಸ್ತಾವಕ್ಕೆ ಸಭೆಯು ಸರ್ವಾನುಮತದಿಂದ ಅಂಗೀಕಾರವನ್ನು ನೀಡಿತು.

ಕರ್ನಾಟಕದಲ್ಲಿ ಮತೀಯ ಗಲಭೆಗಳ ಪ್ರಸ್ತಾವ

ಅಧ್ಯಕ್ಷರು:-ಕರ್ನಾಟಕದ ಮತೀಯ ಸೌಹಾರ್ದತೆಯ ಬಗೆಗಿನ ಪ್ರಸ್ತಾವವನ್ನು ಮಾನ್ಯ ಮುಖ್ಯಮಂತ್ರಿಯವರು ಮಂಡಿಸಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ(ಮಾನ್ಯ ಮುಖ್ಯಮಂತ್ರಿಗಳು) :– ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಈ ಕೆಳಕಂಡ ಪ್ರಸ್ತಾವವನ್ನು ಸಭೆಯ ಅನುಮೋದನೆಗಾಗಿ ಮಂಡಿಸುತ್ತಿದ್ದೇನೆ.

"ಕರ್ನಾಟಕದಲ್ಲಿ ಮತೀಯ ಗಲಭೆಗಳನ್ನುಂಟು ಮಾಡುವ ಕೆಲವು ಘಟನೆಗಳಿಗಾಗಿ ಈ ಸದನವು ತೀವ್ರ ಆತಂಕ ಹಾಗೂ ದುಃಖವನ್ನು ವ್ಯಕ್ತಪಡಿಸುತ್ತದೆ. ಕರ್ನಾಟಕವು ಮತೀಯ ಸ್ನೇಹ, ಸೌಹರ್ದತೆಯ ಉನ್ನತ ಪರಂಪರೆಯನ್ನು ಪೂರ್ವಜರಿಂದಲೂ ಉಳಿಸಿಕೊಂಡು ಬಂದಿದೆ ಮತ್ತು ನಮ್ಮ ಪೂರ್ವಜರು ಸತತ ತ್ಯಾಗ, ಬಲಿದಾನಗಳಿಂದ ಗಳಿಸಿಕೊಟ್ಟ ಒಳ್ಳೆಯ ಕೀರ್ತಿ ಮತ್ತು ಪರಂಪರೆಯನ್ನು ಉಳಿಸಿ, ಬೆಳೆಸಿಕೊಳ್ಳುವುದು ರಾಜ್ಯದ ಪ್ರತಿಯೊಬ್ಬ ನಾಗರೀಕನ ಕರ್ತವ್ಯವಾಗಿದೆ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಶಾಂತಿ ಹಾಗೂ ಸೌಹಾರ್ದತೆಗೆ ಹೆಸರಾದ ಕರ್ನಾಟಕ ರಾಜ್ಯದ ಜನತೆ, ಸಮಾಜದ ಎಲ್ಲಾ ವರ್ಗದ ಜನರೊಂದಿಗೆ ಪರಸ್ಪರ ಪ್ರೀತಿ, ವಿಶ್ವಾಸದಿಂದಿರಲು ಪ್ರಯತ್ನ ಮಾಡುವ ಮೂಲಕ ಜಾತ್ಯಾತೀತ ಭಾರತವನ್ನು ಇನ್ನೂ ಹೆಚ್ಚು ಬಲವಾಗಿ ನಿರ್ಮಿಸುವರೆಂಬ ಆತ್ಮವಿಶ್ವಾಸವನ್ನು ಈ ಸದನವು ಹೊಂದಿದೆ. ಪ್ರತ್ಯೇಕತೆಯ ಬೆದರಿಕೆಯನ್ನು ಒಂದು ಸವಾಲೆಂದು ಪರಿಗಣಿಸಿ, ಎಲ್ಲಾ ಸಮಯದಲ್ಲೂ ಶಾಂತಿಯಿಂದ ಹಾಗೂ ಪೂರ್ವಜರ ನಿರೀಕ್ಷೆಯಂತೆ, ದೇಶಪ್ರೇಮದ ಭಾವನೆಯನ್ನು ಚೇತನಗೊಳಿಸಲು ಶಾಂತಿಪ್ರಿಯ ಕರ್ನಾಟಕದ ಜನತೆಯಲ್ಲಿ ಮನವಿ ಮಾಡಿಕೊಳ್ಳಲು ಈ ಸದನವು ಸರ್ವಾನುಮತದಿಂದ ನಿರ್ಣಯಿಸುತ್ತದೆ.

ಮಾನ್ಯ ಅಧ್ಯಕ್ಷರೆ, ಈ ಮುಂಚೆ ತಮ್ಮ ಕೊಠಡಿಯಲ್ಲಿ ಕಾರ್ಯಕಲಾಪಗಳ ಸಮಿತಿಯ ಸಭೆಯಲ್ಲಿ ಆಗಿರತಕ್ಕ ತೀರ್ಮಾನದ ಪ್ರಕಾರ ಈಗ ನಿರ್ಣಯವನ್ನು ಮಂಡಿಸಿದ್ದೇನೆ. ಈ ಸಂದರ್ಭದಲ್ಲಿ ಈ ನಿರ್ಣಯವನ್ನು ಮಂಡಿಸತಕ್ಕ ಉದ್ದೇಶವಾದರೂ ಇಷ್ಟೆ. ನಿಜ ಹೇಳಬೇಕೆಂದರೆ ಈ ವಿಚಾರದಲ್ಲಿ ನಾನು ಬೆಳಿಗ್ಗೆ ಪ್ರಸ್ತಾವನೆ ಮಾಡತಕ್ಕ ಸಂದರ್ಭದಲ್ಲಿ ಅಂದರೆ ಪೀಠಿಕೆ ಹಾಕತಕ್ಕ ಸಂದರ್ಭದಲ್ಲಿ ಹೇಳಿದ್ದೇನೆ. ಯಾವುದೇ ವಿವರಗಳ ಡಿಸ್‌ಕಷನ್‌ಗೆ ನಾವು ಹೋಗುವ ಹಾಗೆ ಇಲ್ಲ. ಹೋಗಬಾರದು ಎನ್ನತಕ್ಕಂಥ ವಿಚಾರ ಇದೆ. ಏತಕ್ಕಾಗಿ ಹೋಗಬಾರದೆಂಬ ವಿಚಾರ ಇದೆಯೆಂದರೆ, ರಾಷ್ಟ್ರದಲ್ಲಿ ಕೆಲವು

ರಾಜಕೀಯ ಪಕ್ಷಗಳು ಅಥವಾ ವ್ಯಕ್ತಿಗಳು ಮಾಡತಕ್ಕ ಒಂದು ವಿಚಾರ ಏನಿದೆ, ಅದರಿಂದ ರಾಷ್ಟ್ರದ ಉದ್ದಗಲಕ್ಕೂ ಕೂಡ ಇವತ್ತು ಶಾಂತಿಯನ್ನು ಕದಡಿದೆ ಎಂಬ ಮಾತನ್ನು ಮರೆಯುವ ಹಾಗಿಲ್ಲ. ನಾವು ಶಾಂತಿಪ್ರಿಯರು. ನಾವು ದೇಶ ಪ್ರೇಮವನ್ನು ಮೂಲ ಬಂಡವಾಳವಾಗಿ ಇಟ್ಟುಕೊಂಡು ಬಂದಿರತಕ್ಕವರು.

ಸಮಾಜದಲ್ಲಿ ಹಲವಾರು ಧರ್ಮಗಳು ಇವೆ. ಹಿಂದೂ ಧರ್ಮ, ಕ್ರೈಸ್ತ ಧರ್ಮ ಮುಸಲ್ಮಾನ್ ಧರ್ಮ, ಸಿಖ್ ಧರ್ಮ, ಬೌದ್ಧ ಧರ್ಮ, ಜೈನ ಧರ್ಮ, ಇತ್ಯಾದಿ ಧರ್ಮಗಳು ಇವೆ. ನೂರೆಂಟು ಜಾತಿಗಳು ಇವೆ. ಹಾಗೆಯೇ ನೂರಾರು ಭಾಷೆಗಳು ಇವೆ. ಭೌಗೋಳಿಕವಾಗಿ ಭಾರಿ ದೇಶವಾಗಿರುವ ನಮ್ಮ ರಾಷ್ಟ್ರದಲ್ಲಿ ಏಕತೆ ಮತ್ತು ಸಮಗ್ರತೆಯನ್ನು ಮೂಡಿಸತಕ್ಕ ಈ ಒಂದು ವಿಚಾರವನ್ನು ಸುವಿಚಾರವಾಗಿ ಮಾರ್ಪಡಿಸಲೇಬೇಕು. ಅದು ಅತಿ ಅವಶ್ಯಕ. ಇದಕ್ಕಾಗಿ ರಾಷ್ಟ್ರಪಿತ ಮಹಾತ್ಮಾ ಗಾಂಧೀಯವರು, ಪಂಡಿತ್ ಜವಾಹರ್‌ಲಾಲ್ ನೆಹರು, ಅಬ್ದುಲ್ ಕಲಂ ಆಜಾದ್‌ರವರು, ಸರ್‌ದಾರ್ ವಲ್ಲಭಬಾಯಿ ಪಟೇಲ್, ಸುಭಾಷ್ ಚಂದ್ರಬೋಸ್ ಇಂತಹ ಅನೇಕ ಮಹಾನ್ ವ್ಯಕ್ತಿಗಳು ಬಲಿದಾನ ಆಗಿ ಹೋಗಿ ಬಿಟ್ಟಿದ್ದಾರೆ. ಜೈಲಿಗೂ ಸಹ ಹೋಗಿ, ಅನುಭವ ಪಡೆದುಕೊಂಡು ಹೋಗಿದ್ದಾರೆ. ಇನ್ನು ಅಳಿದು ಉಳಿದಿರುವ ಪಳವಳಿಕೆಗಳ ರೀತಿಯಲ್ಲಿ ಇದ್ದಾರೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದವರು ಸ್ವಲ್ಪ ಜನ ಮಾತ್ರ ಇವತ್ತು ಉಳಿದಿದ್ದಾರೆ. ಈ ಸಂದರ್ಭದಲ್ಲಿ ನಾವು ಸೌಹಾರ್ದತೆಯನ್ನು, ಏಕತೆಯನ್ನು ಸಮಗ್ರತೆಯನ್ನು ಬಲಪಡಿಸಬೇಕೆಂದು ಪೂಜ್ಯ ಮಹಾತ್ಮಾ ಗಾಂಧೀಯವರು ಉಪವಾಸ ಮಾಡಿ ಏಕತೆಯನ್ನು ಸಾಧನೆ ಮಾಡಿದರು. ಈ ಸಂದರ್ಭದಲ್ಲಿ ಅದನ್ನು ನಡೆಸಿಕೊಂಡು ಹೋಗತಕ್ಕಂಥ ಜವಾಬ್ದಾರಿ ನಮ್ಮ ಮೇಲಿದೆ. ಶ್ರೀಮತಿ ಇಂದಿರಾಗಾಂಧಿಯವರು ಕೂಡ ಏಕತೆ ಸಮಗ್ರತೆಗೋಸ್ಕರ ತಮ್ಮ ಜೀವವನ್ನು ಪಣವಾಗಿ ಇಟ್ಟು ಹೋದರು ಎನ್ನತಕ್ಕ ಮಾತನ್ನು ನಾವು ಮರೆಯುವ ಹಾಗಿಲ್ಲ. ಇಲ್ಲಿ ಕೆಲವು ಮಾತುಗಳು ಬಂದವು. ಗರ್ವನರ್‌ರವರ ಕಿಡ್ನ್ಯಾಪ್ ದಾವಣಗೆರೆಗೆ ಹೋದಾಗ ನಮ್ಮ ಪಕ್ಷದವರೇ ಯಾರೋ ಹೋಗಿ ಗಲಭೆಗೆ ಕಾರಣಕರ್ತರಾದರು ಎನ್ನತಕ್ಕಂಥ ಹೇಳಿಕೆ ಕೊಟ್ಟಿದ್ದಾರೆ. ಚನ್ನಪಟ್ಟಣ, ರಾಮನಗರದಲ್ಲಿ ಯಾರೊ ಇದ್ದರು ಎನ್ನತಕ್ಕಂಥ ಹೇಳಿಕೆ ಕೊಟ್ಟರು ಎಂಬ ಮಾತನ್ನು ಪತ್ರಿಕಾ ವರದಿಯನ್ನು ಆಧರಿಸಿ ಅವರು ಪ್ರಸ್ತಾಪ ಮಾಡಿದ್ದಾರೆ. ನಾನು ಒಂದು ಮಾತನ್ನು ಸ್ಪಷ್ಟಪಡಿಸುತ್ತೇನೆ. ಅದು ಯಾವುದಕ್ಕೂ ಬುಡವಿಲ್ಲ. ನಾನು ನೋಡಿದ್ದೇನೆ. ನಾನು ಮುಖ್ಯಮಂತ್ರಿಯಾದ ಮೇಲೆ, ಹೋಂಡಿಪಾರ್ಟ್‌ಮೆಂಟನ್ನು ನಡೆಸಿಕೊಂಡ ಮೇಲೆ I have got all the things examined ನಾನೇ ವಿಚಾರ ಮಾಡಿಸಿದ್ದೇನೆ. ಈ ಒಂದು ಆಪಾದನೆಯಲ್ಲಿ ಏನೇನೂ ಹುರುಳಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಒಂದು ವೇಳೆ ಹಾಗೆ ಯಾರಾದರೂ ಇದ್ದರೆ ಸ್ಥಳೀಯವಾಗಿ ನನಗೆ ಗೊತ್ತಿರುವ ಹಾಗೆ ದೊಡ್ಡ ದೊಡ್ಡ ವ್ಯಕ್ತಿಗಳಲ್ಲ, ಎ.ಐ.ಸಿ.ಸಿ. ಜನರಲ್ ಸೆಕ್ರೆಟರಿ ನಮ್ಮವರು ಇದ್ದಾರೆ, ಮತ್ತೊಬ್ಬರು ಇದ್ದಾರೆ, ಎಂದು ಇದಕ್ಕೆ ಟ್ಯಾಗಾನ್ ಮಾಡತಕ್ಕ ಪ್ರವೃತ್ತಿ ಒಳ್ಳೆಯದಲ್ಲ. ಯಾವುದೇ ಪಕ್ಷದ ಮೇಲೆ ಹೇಳುವುದು ಒಳ್ಳೆಯದಲ್ಲ. ಆದರೆ ಸ್ಥಳೀಯವಾಗಿ ಯಾರೇ ಇರಬಹುದು, ಯಾವುದೇ ಪಕ್ಷದವರು ಇರಬಹುದು, ಕಾನೂನು ಬದಲಾವಣೆ ಮಾಡತಕ್ಕ ವಿಚಾರದಲ್ಲಿ ಇವತ್ತು ಸೆಕ್ಷನ್ ಯಾವುದೇ ಪಕ್ಷವನ್ನು ನೋಡಿ ಹೇಳುವುದಿಲ್ಲ. ತಕ್ಷೀರ್ ಮಾಡತಕ್ಕ ವಿಚಾರವನ್ನು ಹೇಳುತ್ತದೆಯೇ ಹೊರತು ಪಕ್ಷದ ವಿಚಾರ ಹೇಳುವುದಿಲ್ಲ. ಆದ್ದರಿಂದ ತಪ್ಪು, ಯಾರೇ ಮಾಡಿರಲಿ, ಒಂದು ವೇಳೆ ಬೇರೆ ಪಕ್ಷ ಇರಬಹುದು, ನಮ್ಮ ಪಕ್ಷವಿರಬಹುದು, ಯಾರೇ ಇರಬಹುದು, ಅವರ ಮೇಲೆ ಕಾನೂನು ಕ್ರಮ ಆಗೆದುಕೊಳ್ಳಬೇಕೆಂದು ಸ್ಪಷ್ಟವಾಗಿ ನಮ್ಮ ಅಧಿಕಾರಿಗಳಿಗೆ ನಮ್ಮ ಸರ್ಕಾರ ಆದೇಶ ಕೊಟ್ಟಿದೆ. ಅದರ ಮುಗ್ಗೆ ನಾನೂ ಕೂಡ ಆದೇಶ ಕೊಟ್ಟಿದ್ದೇನೆ. ನಿಜ ಹೇಳಬೇಕೆಂದರೆ, ಇಡೀ ಕರ್ನಾಟಕ ರಾಜ್ಯದಲ್ಲಿ ನಡೆದಿರತಕ್ಕಂಥ ಘಟನೆಗಳು ಮನಸ್ಸಿಗೆ ನೋವನ್ನು ಉಂಟು ಮಾಡಿವೆ. ನಾನು ಮುಖ್ಯ ಮಂತ್ರಿಯಾದ ಮೇಲೆ ರಾಮನಗರಕ್ಕೆ ಹೋಗಿ ಬಂದಿದ್ದೇನೆ, ಚನ್ನಪಟ್ಟಣಕ್ಕೆ ಹೋಗಿ ಬಂದದ್ದೇನೆ. ಕೆ.ಎಂ. ದೊಡ್ಡಿಗೆ ಹೋಗಿ ಬಂದಿದ್ದೇನೆ. ಮೊನ್ನೆ ಕೋಲಾರಕ್ಕೆ ಹೋಗಿ ಬಂದಿದ್ದೇನೆ, ಶ್ರೀನಿವಾಸಪುರ ತಾಲ್ಲೂಕಿಗೆ ಹೋಗಿ ಬಂದಿದ್ದೇನೆ. ಅಲ್ಲಿ ಮನೆ ಕಳೆದುಕೊಂಡಿರುವವರನ್ನು ನೋಡಿದ್ದೇನೆ, ಅಂಗಡಿಗಳು ಹಾಳಾಗಿರುವುದನ್ನು

ನೋಡಿದ್ದೇನೆ. ಚನ್ನಪಟ್ಟಣ ಮುಂತಾದಕಡೆ ಸುಟ್ಟಿರತಕ್ಕಂಥದ್ದನ್ನು ನೋಡಿದ್ದೇನೆ, ಜನ, ಮತ್ತು ಪ್ರಾಣ ಹಾನಿಯಾಗಿರುವುದನ್ನು ಮನೆಗೇ ಹೋಗಿ ನೋಡಿದ್ದೇನೆ. ಆವರಿಗೆ ಸಿಗುವ ಸೌಲಭ್ಯಗಳ ಬಗ್ಗೆ ಮಾತನಾಡಿದ್ದೇನೆ. ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಸುಮಾರು 300-400 ಎಕರೆಯಲ್ಲಿ ಮಾವಿನ ಗಿಡಗಳನ್ನು ಕಡಿದು ಹಾಕಿರುವುದನ್ನು ನೋಡಿಕೊಂಡು ಬಂದಿದ್ದೇನೆ.

ನನ್ನ ಜೊತೆಗೆ ಮಾನ್ಯ ಮಂತ್ರಿಗಳಾದ ಶ್ರೀ ಆಜೀಜ್ ಸೇಠ್‌ಜಿಯವರು, ಅನೇಕ ಮಿತ್ರರು, ಆ ಜಿಲ್ಲೆಯ ಎಲ್ಲಾ ಶಾಸಕರು, ಶ್ರೀ ವೆಂಕಟಪ್ಪನವರು, ಶ್ರೀ ನಾಗರಾಜುರವರು ಮತ್ತು ನಮ್ಮ ದೇವರಾಜ್‌ರವರು ಇಲ್ಲಿಂದ ಬಂದಿದ್ದರು. ಹೀಗೆ ನಾವೆಲ್ಲರೂ ಕೂಡ ಹೋಗಿ ನೋಡಿಕೊಂಡು ಬಂದೆವು. ನಾವು ಆಲ್ಲಿ ಹೋದಾಗ ಸಾವಿರಗಟ್ಟಲೆ ಜನ ಬಂದು ನಮ್ಮನ್ನು ಬಹಳ ಅಭಿಮಾನದಿಂದ ಕಂಡರು, ವಿಚಾರ ಹೇಳಿದರು, ಆಗಿರತಕ್ಕಂಥ ಅನ್ಯಾಯಕ್ಕೆ ಮರುಕ ವ್ಯಕ್ತಪಡಿಸಿದರು, ಕಣ್ಣೀರು ಸುರಿಸಿದರು. ಎಲ್ಲಾ ಧರ್ಮದವರೂ ಕಣ್ಣೀರು ಸುರಿಸಿದ್ದಾರೆ. ನೋವನ್ನು ಅನುಭವಿಸಿದ್ದಾರೆ. ಈ ಸಂದರ್ಭದಲ್ಲಿ ಆ ಕುಟುಂಬದವರಿಗೆ ಹೇಳುತ್ತಿದ್ದೇನೆ. ಅನ್ಯಾಯಕ್ಕೆ ಒಳಗಾಗಿ ಯಾರ ಆಸ್ತಿ, ಜೀವಗಳಿಗೆ ಹಾನಿಯಾಗಿದೆ, ಯಾರು ಕೈಕಾಲುಗಳಿಗೆ ಪೆಟ್ಟು ತಿಂದು ನೋವನ್ನು ಅನುಭವಿಸಿದ್ದಾರೆ, ಅಂಥವರ ನೋವಿನಲ್ಲಿ ಸರ್ಕಾರ ಕೂಡ ಅವಿಭಾಜ್ಯ ಅಂಗವಾಗಿ ಉಳಿದಿದೆ ಎಂದು ಸರ್ಕಾರದ ಪರವಾಗಿ ಈ ಸದನದ ಮುಖಾಂತರ ನಾನು ಹೇಳಬಯಸುತ್ತೇನೆ. ಜೊತೆಗೆ ಈಗ ಪರಿಹಾರ ಹಣದ ವಿವರ ನಾನು ಹೇಳುವುದಿಲ್ಲ. ಸತ್ತು ಹೋದವರಿಗೆ ಪರಿಹಾರ ರೂ.20,000ದಿಂದ ರೂ.50,000ಕ್ಕೆ ಏರಿಸಿದ್ದೇವೆ, ಗಾಯಗೊಂಡವರಿಗೆ ಪರಿಹಾರವನ್ನು ರೂ.500ರಿಂದ ರೂ.2,500ಕ್ಕೆ ಏರಿಸಿದ್ದೇವೆ, ಆದೇ ರೀತಿ ಮನೆ ಮಠಗಳನ್ನು ಕಳೆದುಕೊಂಡವರಿಗೆ ಕೊಡುವ ಹಣವನ್ನು ಹೆಚ್ಚಿನ ಪ್ರಮಾಣದಲ್ಲಿ ಏರಿಸಿದ್ದೇವೆ. ಸಾಲ ಸೌಲಭ್ಯಗಳನ್ನು ಕೊಡುವಂತಹ ಏರ್ಪಾಡುಗಳನ್ನು ಮಾಡಿದ್ದೇವೆ. ಯಾರ್ಯಾರ ಗುಡಿಸಲುಗಳು ಹಾಳಾಗಿ ಹೋಗಿವೆ ಅವರಿಗೆ ಸರ್ಕಾರದ ವತಿಯಿಂದ ಹೆಂಚಿನ ಮನೆಗಳನ್ನು ಕಟ್ಟಿಸಿಕೊಡಬೇಕೆಂಬುದು ನಾವು ಈಗಾಗಲೆ ತೆಗೆದುಕೊಂಡಿರುವ ತೀರ್ಮಾನಗಳಲ್ಲಿ ಒಂದು. ಇದರ ಜೊತೆಗೆ ಬೇರೆ ಬೇರೆ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಳ್ಳುವುದರಲ್ಲಿದೆ, ಇಷ್ಟಲ್ಲದೆ ನಾವು ತ್ವರಿತಗತಿಯಲ್ಲಿ ಜನರಿಗೆ ಆಶ್ರಯ ಕೊಡಬೇಕಾಗಿದೆ, ಅವರಲ್ಲಿ ಧೈರ್ಯ ತುಂಬಬೇಕಾಗಿದೆ. ಕೆ.ಎಂ. ದೊಡ್ಡಿಯ ಜನರು ಚನ್ನಪಟ್ಟಣದ ಒಂದು ಮನೆಯಲ್ಲಿ ಸಮಾವೇಶಗೊಂಡು ಮಾಸ್ ಮೀಟಿಂಗ್ ನಡೆಸಿದ್ದುದನ್ನು ನಾವೆಲ್ಲ ಹೋಗಿ ನೋಡಿಕೊಂಡು ಬಂದಿದ್ದೇವೆ. ನಾನು ಹೋಗುವುದಕ್ಕಿಂತ ಮೊದಲು ಶ್ರೀ ಬಸವಲಿಂಗಪ್ಪಾಜಿಯವರು ಮತ್ತು ಶ್ರೀ ಕೆ.ಹೆಚ್.ಪಾಟೀಲ್‌ಜಿಯವರು ಮತ್ತು ನಮ್ಮ ಅನೇಕ ಹಿರಿಯ ಮಾನ್ಯ ಮಂತ್ರಿಗಳು ಹೋಗಿ ನೋಡಿಕೊಂಡು ಬಂದು ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ಈ ರೀತಿಯಾಗಿ ಹಿಂದಿನ ಮಂತ್ರಿಮಂಡಲದಲ್ಲಿ ಸಚಿವರುಗಳಾಗಿ ನಾವು ಕೆಲಸವನ್ನು ಮಾಡಿದ್ದೇವೆ ಮತ್ತು ಈ ಮಂತ್ರಿಮಂಡಲ ರಚನೆಯಾದ ಮೇಲು ನಾವು ಜವಾಬ್ದಾರಿಯಿಂದ ಕೆಲಸ ಮಾಡಿದ್ದೇವೆ. ಆದೇನೇ ಇರಲಿ, ಈ ಸಂದರ್ಭದಲ್ಲಿ ನಾನು ವಿವರಗಳಿಗೆ ಹೋಗುವುದಿಲ್ಲ. ಕಾರಣಕರ್ತರು ಯಾರು ಎಂದು ಗೊತ್ತಾಗಿದೆ. ಇವತ್ತು ಈ ಸದನದ ಮುಖಾಂತರ ಕರ್ನಾಟಕ ರಾಜ್ಯದ ಜನತೆಯ ಎಲ್ಲಾ ವರ್ಗದವರಿಗೆ, ಎಲ್ಲಾ ಧರ್ಮದವರಿಗೆ, ಎಲ್ಲಾ ಜಾತೀಯವರಿಗೆ, ಎಲ್ಲಾ ಭಾಷೆಯವರಿಗೆ, ಬಡವ ಬಲ್ಲಿದರಿಗೆ, ಎಲ್ಲಾ ಗ್ರಾಮ, ಪಟ್ಟಣ ಮತ್ತು ನಗರ ಪ್ರದೇಶದ ಜನರಿಗೆ ಶಾಂತಿ ಮತ್ತು ಸೌಹರ್ದತೆಯನ್ನು ಕಾಪಾಡಿಕೊಂಡು ಬರಲು ನಾನು ಸರ್ಕಾರದ ಪರವಾಗಿ ಮನವಿ ಮಾಡಿಕೊಳ್ಳುತ್ತೇನೆ ಮತ್ತು ಆದಕ್ಕಾಗಿ ಈ ನಿರ್ಣಯವನ್ನು ಮಂಡನೆ ಮಾಡುತ್ತಿದ್ದೇನೆ. ಈ ಒಂದು ಮನವಿ ಎಷ್ಟು ಒಳ್ಳೆಯ ಮನವಿಯೆಂದರೆ ಇದನ್ನು ವಿರೋಧ ಪಕ್ಷದ ನಾಯಕರೂ ಒಪ್ಪಿಕೊಂಡಿದ್ದಾರೆ. ಕಡೆಯ ಪಕ್ಷ ಇದರ ಮಂಡನೆಯ ಸಮಯದಲ್ಲಾದರೂ ಕರ್ನಾಟಕ ಜನತೆಯ ಹಿತದೃಷ್ಟಿಯಿಂದ ಮನವಿ ಮಾಡುವುದಕ್ಕಾದರೂ ಅವರು ಸದನದಲ್ಲಿ ಇರಬೇಕಾಗಿತ್ತು, ಅವರ ಜವಾಬ್ದಾರಿಯನ್ನು ನಿರ್ವಹಣೆ ಮಾಡಬೇಕಾಗಿತ್ತು. ಇದರಲ್ಲಿ ಅವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ ಎಂದು ನಾನು ಅನಿವಾರ್ಯವಾಗಿ ಹೇಳುತ್ತೇನೆ. ಶಾಂತಿ ಮತ್ತು ಸೌಹಾರ್ದತೆಯನ್ನು ಎಲ್ಲಾ ಧರ್ಮಗಳಲ್ಲಿ ಮತ್ತು ಎಲ್ಲಾ ಕೋಮುಗಳಲ್ಲಿ ತರಬೇಕೆಂದು ನಾನು ಈ ಮೂಲಕ ಮನವಿ

ಮಾಡುತ್ತೇನೆ. ಶಾಂತಿಯನ್ನು ಕಾಪಾಡತಕ್ಕಂಥ ವಿಚಾರದಲ್ಲಿ ನಮ್ಮ ಪೋಲೀಸ್ ಇಲಾಖೆಯವರು ಶಕ್ತಿ ಮೀರಿ ಕೆಲಸವನ್ನು ಮಾಡಿದ್ದಾರೆ, ಇದರಲ್ಲಿ ಲೋಪದೋಷಗಳಾಗಿರಬಹುದು. ನಾವು ಅದನ್ನೂ ಕೂಡ ಸರಿಪಡಿಸಿಕೊಂಡು ಹೋಗುತ್ತೇವೆ. ಈ ಸಮಸ್ಯೆಯನ್ನು ನಿಭಾಯಿಸುವುದಕ್ಕೆ ಪೋಲೀಸ್ ಇಲಾಖೆ ಯೊಂದರಿಂದ ಸಾಧ್ಯವಿಲ್ಲ. ಸರ್ಕಾರ ಒಂದೇ ಇದನ್ನು ಮಾಡುವುದಕ್ಕೆ ಕಷ್ಟವಾಗುತ್ತದೆ. ಇದಕ್ಕೆ ಸಮಾಜದ ಎಲ್ಲಾ ವರ್ಗದ ಜನರ ಸಹಕಾರ ಮತ್ತು ಸೌಹಾರ್ದತೆ ಬೇಕಾಗುತ್ತದೆ. ಸರ್ಕಾರ ಮತ್ತು ಸಮಾಜ ಎರಡೂ ಒಟ್ಟೊಟ್ಟಿಗೆ ಹೋಗಬೇಕಾಗುತ್ತದೆ. ಇವತ್ತು ನಮ್ಮ ನಮನವನ್ನು ಸಮಾಜ ಪ್ರೀತಿ ಮತ್ತು ವಿಶ್ವಾಸದಿಂದ ಗ್ರಹಿಸುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಭಾವಿಸುತ್ತೇನೆ. ನಮ್ಮ ಈ ನಮಸ್ಕಾರಕ್ಕೆ ಸಮಾಜ ಪುರಸ್ಕಾರವನ್ನು ಸ್ಪಷ್ಟವಾಗಿ ನೀಡಬೇಕು ಹಾಗೂ ಈ ಕರೆಗೆ ಓಗೊಟ್ಟು ಕೋಮು ಸೌಹಾರ್ದತೆಯನ್ನು ಸಂಪೂರ್ಣವಾಗಿ ಬೆಳೆಸಿಕೊಂಡು ಹೋಗಬೇಕೆಂದು ಕೇಳಿಕೊಳ್ಳುತ್ತೇನೆ. ಕೋಮು ಸೌಹಾರ್ದತೆಯನ್ನು ದೇಶದಲ್ಲಿ ಬೆಳೆಸೋಣ, ಪ್ರಪ್ರಥಮವಾಗಿ ನಮ್ಮ ರಾಜ್ಯದಲ್ಲಿ ಬೆಳೆಸೋಣ. ಈ ಒಂದು ಪರಿಸ್ಥಿತಿಯಲ್ಲಿ ದುಡಿದಿರತಕ್ಕಂಥ ಕಂದಾಯ ಇಲಾಖೆ ಪೋಲೀಸ್ ಇಲಾಖೆ ಮತ್ತು ಇತರ ಇಲಾಖೆಗಳ ನೌಕರರನ್ನು ಸ್ಮರಿಸಲು ಈ ಸಂದರ್ಭದಲ್ಲಿ ನಾನು ಇಷ್ಟಪಡುತ್ತೇನೆ. ಇವರಲ್ಲಿ ಕೆಲವರಂತೂ ಪೆಟ್ಟು ತಿಂದು ಆಸ್ಪತ್ರೆಗೆ ಸೇರಿದ್ದಾರೆ. ನಾನು ಕೋಲಾರಕ್ಕೆ ಹೋಗಿದ್ದಾಗ ಕೋಮು ಸೌಹಾರ್ದತೆಯನ್ನು ಕಾಪಾಡಿಕೊಂಡು ಬರಲು ಸ್ಥಳೀಯ ಮುಖಂಡರಲ್ಲಿ ವಿನಂತಿ ಮಾಡಿದ್ದೇನೆ. ಅನೇಕ ಜನರು ಸಹಾಯ ಮಾಡಿದ್ದಾರೆ. ರಾಜಕೀಯ ಪಕ್ಷದವರು, ಮುನಿಸಿಪಲ್ ಅಧ್ಯಕ್ಷರು, ಸದಸ್ಯರು, ಮಂಡಲ್ ಪಂಚಾಯತ್ ಅಧ್ಯಕ್ಷರು, ಸದಸ್ಯರು ಎಲ್ಲರಿಗೂ ಈ ಸಂದರ್ಭದಲ್ಲಿ ವಿನಂತಿ ಮಾಡಿ ಈ ಕೋಮು ಸೌಹಾರ್ದತೆಯನ್ನು ಕಾಪಾಡಿಕೊಂಡು ಬರಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI QUMURUL ISLAM (Gulbarga):- Mr. Speaker Sir, the Hon'ble Chief Minister has moved this resolution in this House. Through this resolution he has appelaed to the people of Karnataka to maintain communal harmony and peace. Sir, our State since immemorial times is famous for communal harmony. But today the most unfortunate thing is some fascists and communal forces are organising and mobilising themselves and they have become a threat to the secularism of our Country. So it is the duty of all of us to curb these forces with an iron hand. Today Sri S.Bangarappa is the Chief Minister and people are thinking that he is a dynamic Chief Minister and is famous for his commitment and his dynamism will definitely repeat the history of Sri Devaraj Urs period when there was communal harmony in this State. Sir, on this occasion I would like to give two or three suggestions. First, the time has come now that there should be a recruitment of anti-communal force. Recruitment to the anti-communcal force should comprise all sections of the society more particularly Minorities and Dalits. Secondly, recently a decision was taken by the Cabinet that those who died in the communal riots recently should be paid a compensation of Rs.50,000. My suggestion is that this amount has to be enhanced to one lakh rupees and the commitment which is made by this government that the houses which have been burnt would be fully constructed by the Government, should be implemented immediately. Further, people who have suffered and left their places should came and

occupy their houses. I also appeal that loans should be given to those whose shops have been looted and this could be done by this Government. Even though the Government has announced to give Rs.50,000 as compensation, still that compensation has not reached the people. They have received only Rs.20,000 at the old rate. Not only this full compensation should be paid to them, but also the compensation should be increased to Rs.1 lakh, because other States like U.P., Bihar, have already taken a decision to pay Rs.1 lakh for the victims of the communal riots. With these few words, I hope that this Government and the Hon'ble Chief Minister, who is known for his commitment and dynamism, will see that law and order, and peace will be maintained in this State. If steps are taken for the minorities to live honourably in this country, then we are satisfied. If their life is safe and property is safe then only we can think of other things. With this, I fully support the resolution moved by the Hon'ble Chief Minister in this House.

SRI BHAKATHAVATSALAM (K.G.F.):- Mr. Speaker Sir, the Government headed by Mr. S.Bangarappa is of the people, by the people and for the people. Mr.Bangarappa's Government represents the symbol of the hopes and aspiration.....

MR. SPEAKER:- Why don't you go to your seat and speak there? You don't belong to that seat. ಸದನದ ನಿಯಮಾವಳಿ ಪ್ರಕಾರ ಯಾವ ಯಾವ ಸದಸ್ಯರಿಗೆ ಯಾವ ಯಾವ ಜಾಗವನ್ನು ಗೊತ್ತುಪಡಿಸಿದ್ದೇವೋ ಆ ಜಾಗದಿಂದ ಅವರು ಮಾತನಾಡಿದರೆ ಮಾತ್ರ ರೆಕಾರ್ಡ್‌ಗೆ ಹೋಗುತ್ತದೆ.

SRI BHAKATHAVATSALAM:- It is a Government of the people, for the people and by the people. Mr. Bangarappa's Government will fulfill the hopes and aspirations of the people. Mr.Bangarappa's Government is anegalitarian Government, Mr.Bangarappa's Government is the Government promote maximum social advantage to the all sections of the society; Mr.Bangarappa's Government is a popular Government based on ideology and conviction of the inter-democracy. We are happy that Mr.Bangarappa has been elected as the Leader of the Congress (I) Legislature Party. Mr.Bangarappa is a socialist leader with Congress culture and has great concern to the society especially to the weaker sections, linguistic and religious minorities. I wholeheardly extend our support i.e., A.I.A.D.M.K Party's support to Mr.Bangarappa and his Government and wish every success in his endeavour.

ಪ್ರಸ್ತಾವದ ಅಂಗೀಕಾರ

ಅಧ್ಯಕ್ಷರು:- ಪ್ರಸ್ತಾಪ ಏನೆಂದರೆ:- "ಕರ್ನಾಟಕದಲ್ಲಿ ಮತೀಯ ಗಲಭೆಗಳನ್ನುಂಟು ಮಾಡುವ ಕೆಲವು ಘಟನೆಗಳಿಗಾಗಿ ಈ ಸದನವು ತೀವ್ರ ಆತಂಕ ಹಾಗೂ ದುಃಖವನ್ನು ವ್ಯಕ್ತಪಡಿಸುತ್ತದೆ."

ಕರ್ನಾಟಕವು ಮತೀಯ ಸ್ನೇಹ, ಸೌಹಾರ್ದತೆಯ ಉನ್ನತ ಪರಂಪರೆಯನ್ನು ಪೂರ್ವಜರಿಂದಲೂ ಉಳಿಸಿಕೊಂಡು ಬಂದಿದೆ ಮತ್ತು ನಮ್ಮ ಪೂರ್ವಜರು ಸತತ ತ್ಯಾಗ ಬಲಿದಾನಗಳಿಂದ ಗಳಿಸಿಕೊಟ್ಟ ಒಳ್ಳೆಯ ಕೀರ್ತಿ ಮತ್ತು ಪರಂಪರೆಯನ್ನು ಉಳಿಸಿ, ಬೆಳೆಸಿಕೊಳ್ಳುವುದು ರಾಜ್ಯದ ಪ್ರತಿಯೊಬ್ಬ ನಾಗರೀಕನ ಕರ್ತವ್ಯವಾಗಿದೆ. ಈ ಸಂಧಿಗ್ಧ ಪರಿಸ್ಥಿತಿಯಲ್ಲಿ ಶಾಂತಿ ಹಾಗೂ ಸೌಹಾರ್ದತೆಗೆ ಹೆಸರಾದ ಕರ್ನಾಟಕ ರಾಜ್ಯದ ಜನತೆ, ಸಮಾಜದ ಎಲ್ಲಾ ವರ್ಗದ ಜನರೊಂದಿಗೆ ಪರಸ್ಪರ [illegible]ತಿ, ವಿಶ್ವಾಸದಿಂದಿರಲು ಪ್ರಯತ್ನ ಮಾಡುವ ಮೂಲಕ ಜಾತ್ಯಾತೀತ ಭಾರತವನ್ನು ಇನ್ನೂ ಹೆಚ್ಚು ಬಲವಾಗಿ ನಿರ್ಮಿಸುವರೆಂಬ ಆತ್ಮವಿಶ್ವಾಸವನ್ನು ಈ ಸದನವು ಹೊಂದಿದೆ. ಪ್ರತ್ಯೇಕತೆಯ ಬೆದರಿಕೆಯನ್ನು ಒಂದು ಸವಾಲೆಂದು ಪರಿಗಣಿಸಿ ಎಲ್ಲಾ ಸಮಯದಲ್ಲೂ ಶಾಂತಿಯಿಂದ ಹಾಗೂ ಪೂರ್ವಜರ ನಿರೀಕ್ಷೆಯಂತೆ, ದೇಶಪ್ರೇಮದ ಭಾವನೆಯನ್ನು ಚೇತನಗೊಳಿಸಲು ಶಾಂತಿಪ್ರಿಯ ಕರ್ನಾಟಕದ ಜನತೆಯಲ್ಲಿ ಮನವಿ ಮಾಡಿಕೊಳ್ಳಲು ಈ ಸದನವು ಸರ್ವಾನುಮತದಿಂದ ನಿರ್ಣಯಿಸುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು:- ಈಗ ವಿಶ್ವಾಸ ಮತದ ನಿರ್ಣಯದ ಮೇಲೆ ನಡೆದ ಚರ್ಚೆಯಲ್ಲಿ 193 ನಿಮಿಷಗಳನ್ನು ವಿರೋಧಪಕ್ಷದವರು ತೆಗೆದುಕೊಂಡಿದ್ದಾರೆ, 50 ನಿಮಿಷಗಳನ್ನು ಆಡಳಿತಪಕ್ಷದವರು ತೆಗೆದುಕೊಂಡಿದ್ದಾರೆ, ಒಟ್ಟು 265 ನಿಮಿಷಗಳು ಅಂದರೆ 4.25 ಗಂಟೆಗಳಾಯಿತು.

ಈಗ ಸದನವನ್ನು ಇಲ್ಲಿಗೆ ಮುಕ್ತಾಯಮಾಡಿ ತಾ: 19-11-1990 ರವರೆಗೆ ಮುಂದೂಡಿದ್ದೇನೆ.

(ಸದನವು ಸಂಜೆ 6.33 ಗಂಟೆಗೆ ಮುಕ್ತಾಯವಾಗಿ ಮತ್ತೆ ತಾ: 19-11-1990 ರಂದು ಸಮಾವೇಶಗೊಳ್ಳಲು ತೀರ್ಮಾನಿಸಿತು.)

+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.